**ಸಾಕ್ಷಿಯನ್ನು ಇಂದು ದಿನಾಂಕಃ 18.12.2023 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಡಬ್ಲ್ಯೂ.ಎ.ವಕೀಲರಿಂದ.**

ಶೋಭಾ 1 ನೇ ವಾದಿ ನನ್ನ ಮೊದಲನೇ ಹೆಂಡತಿ ಎಂದರೆ ಸರಿ. 2 ನೇ ವಾದಿ ನನ್ನ ಮಗ ಎಂದರೆ ಸರಿ. 2008 ರಲ್ಲಿ 1 ನೇ ವಾದಿಯೊಂದಿಗೆ ನನ್ನ ಮದುವೆ ಆಗಿರುತ್ತದೆ ಎಂದರೆ ಸರಿ. 2 ನೇ ವಾದಿಗೆ ಈಗ 9 ವರ್ಷಗಳು ಇರುತ್ತವೆ. 1 ನೇ ವಾದಿಯೊಂದಿಗೆ 2 ನೇ ವಾದಿ ಇರುತ್ತಾನೆ ಎಂದರೆ ಸರಿ. 1 ನೇ ವಾದಿ ತನ್ನ ತಂದೆ ತಾಯಿಯೊಂದಿಗೆ ವಾಸ ಮಾಡುತ್ತಾರೆ ಎಂದರೆ ಸರಿ. 07.08.2023 ರಿಂದ 1 ನೇ ವಾದಿ ತನ್ನ ತಂದೆ ತಾಯಿಯೊಂದಿಗೆ ವಾಸ ಮಾಡುತ್ತಿದ್ದಾರೆ. ನಾನು ವಾದಿಗಳಿಗೆ ಜೀವನಾಂಶವಾಗಿ ಹಣವನ್ನು ನೀಡಿರುವುದಿಲ್ಲ ಎಂದರೆ ಸರಿ. ವಾದಿಗಳು ನನ್ನೊಂದಿಗೆ ಬಂದು ವಾಸ ಮಾಡಬೇಕು ಎಂದು ನಾನು ಯಾವುದೇ ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿ. ನಾನು ಈಗ 2 ನೇ ಹೆಂಡತಿಯೊಂದಿಗೆ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ 2 ನೇ ಹೆಂಡತಿಯ ಹೆಸರು ದಾನಮ್ಮ ಎಂದರೆ ಸರಿಯಲ್ಲ. 1 ನೇ ವಾದಿ 2009 ರಲ್ಲಿ ಗರ್ಭಿಣಿ ಆಗಿರುತ್ತಾರೆ. 2010 ರಲ್ಲಿ ಜನ್ಮ ನೀಡಿರುತ್ತಾರೆ. 1 ನೇ ವಾದಿ ಗರ್ಭಿಣಿ ಆಗಿದ್ದಾಗ ರೂ.50,000/- ಗಳ ಹಣವನ್ನು ತೆಗೆದುಕೊಂಡು ಬರಬೇಕು ಎಂದು ನಾನು ಅವರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿಗೆ ಹಣ ತರಲು ಆಗುವುದಿಲ್ಲ ಎಂದ ಕಾರಣ ಹೊಡೆ ಬಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೊಡೆ ಬಡೆ ಮಾಡಿದ ಕಾರಣ 1 ನೇ ವಾದಿಗೆ ಮೊದಲು ಗರ್ಭಪಾತ ಅಗಿರುತ್ತದೆ ಎಂದರೆ ಸರಿಯಲ್ಲ. 1 ನೇ ವಾದಿಗೆ ಉಪಚಾರಕ್ಕಾಗಿ ತವರು ಮನೆಗೆ ಕಳುಹಿಸಿಕೊಟ್ಟಿದ್ದೇ ಎಂದರೆ ಸರಿಯಲ್ಲ. 1 ನೇ ವಾದಿ ಹುಷಾರಾದ ನಂತರ ಮರಳಿ ನನ್ನ ಬಳಿ ಬಂದು ಬಿಟ್ಟಿರುತ್ತಾರೆ ಎಂದರೆ ಸರಿಯಲ್ಲ. ತದನಂತರ 1 ನೇ ವಾದಿ 2 ನೇ ವಾದಿಯ ಗರ್ಭಿಣಿ ಆಗಿದ್ದರು ಎಂದರೆ ಸರಿ. 2 ನೇ ವಾದಿಯು ಗರ್ಭದಲ್ಲಿ ಇದ್ದಾಗ 1 ನೇ ವಾದಿಗೆ ಮತ್ತೇ ಗರ್ಭಪಾತ ಆಗಬೇಕು ಎಂದು ಹೊಡೆ ಬಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿ ನಮ್ಮ ಬಳಿ ಡೆಲಿವರಿ ಆಗಬಾರದು ಎಂದು ಅವಳನ್ನು ಕಳುಹಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ವಾದಿ ಅವರ ತವರು ಮನೆಯಲ್ಲಿಯೇ 2 ನೇ ವಾದಿಗೆ ಜನ್ಮ ನೀಡಿರುತ್ತಾರೆ ಎಂದರೆ ಸರಿ. 2 ನೇ ವಾದಿ ಹುಟ್ಟಿದ ನಂತರ ಅವರನ್ನು ವಾಪಸ್ಸು ಕರೆ ತರಲು ನಾನು ಅವರ ಬಳಿಗೆ ಹೋಗಿರುವುದಿಲ್ಲ ಎಂದರೆ ಸರಿ.

ನನ್ನ ತಂದೆಯವರು ಜೀವಂತವಾಗಿ ಇದ್ದಾರೆ. ನಾವು ಮೂರು ಜನ ಅಣ್ಣ ತಮ್ಮಂದಿರು ಎಂದರೆ ಸರಿ. ನಮ್ಮ ಕುಟುಂಬದವರು 6 ವರ್ಷಗಳ ಹಿಂದೆ ಹಂಚಿಕೆ ಮಾಡಿಕೊಂಡಿರುತ್ತೇವೆ. ಶ್ರೀಶೈಲರವರ ಪಾಲಿಗೆ ಸರ್ವೆ ನಂ.254/4 2 ಎಕರೆ ಹಾಗೂ 254/6 1 ಎಕರೆ ಹೋಗಿರುತ್ತದೆ ಎಂದರೆ ಸರಿ. ಕಾಶಿನಾಥರವರಿಗೆ ಸರ್ವೆ ನಂ.253/1 2 ಎಕರೆ 18 ಗುಂಟೆ ಹೋಗಿರುತ್ತದೆ ಎಂದರೆ ಸರಿ. ನನ್ನ ಪಾಲಿಗೆ ಸರ್ವೆ ನಂ.254/2 2 ಎಕರೆ ಬಂದಿರುತ್ತದೆ ಎಂದರೆ ಸರಿ. ನನ್ನ ತಂದೆಯವರ ಪಾಲಿಗೆ 252/2 3 ಎಕರೆ 4 ಗುಂಟೆ ಹಾಗೂ 253/2 2 ಎಕರೆ ನನ್ನ ತಂದೆಯವರಿಗೆ ಹೋಗಿರುತ್ತದೆ ಎಂದರೆ ಸಾಕ್ಷಿ ಸರ್ವೆ ನಂ.253/2 ರಲ್ಲಿ ಕೇವಲ 1 ಎಕರೆ ಹೋಗಿರುತ್ತದೆ ಎಂದು ಹೇಳುತ್ತಾರೆ. ಪಾಲು ಹಂಚಿಕೆ ಪ್ರಕಾರ ಪಹಣಿಗಳು ಬದಲಾವಣೆ ಆಗಿರುವುದಿಲ್ಲ. ನಿಪಿ-4 ರಲ್ಲಿನಅಂಶಗಳು ಸರಿ ಇರುತ್ತವೆ. ನಿಪಿ-5 ರಲ್ಲಿನ ಅಂಶಗಳು ಸರಿ ಇರುತ್ತವೆ. ನಿಪಿ-

6 ರಲ್ಲಿನ ಅಂಶಗಳು ಸರಿ ಇರುತ್ತವೆ. ನಿಪಿ-7 ರಲ್ಲಿನ ಅಂಶಗಳು ಸರಿ ಇರುತ್ತವೆ. ನಿಪಿ-8 ರಲ್ಲಿನ ಅಂಶಗಳು ಸರಿ ಇರುತ್ತವೆ. ನಿಪಿ-9 ರಲ್ಲಿನ ಅಂಶಗಳು ಸರಿ ಇರುತ್ತವೆ. ನಾನು 2 ನೇ ವಾದಿಗೆ ಪಾಲು ಹಂಚಿಕೆ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನಾನು ಒಟ್ಟು ಕುಟುಂಬದ ಆಸ್ತಿಯ ಉತ್ಪನ್ನದಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸಾಲ ಮಾಡಿ ಖರೀದಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಸಾತಪ್ಪ ಗುರುಶೆಟ್ಟಿರವರಿಂದ ನಾನು ರೂ.1,00,000/- ಗಳ ಸಾಲ 2005 ರಲ್ಲಿ ಪಡೆದಿರುತ್ತೇನೆ. ಸಾಲ ಪಡೆದ ಬಗ್ಗೆ ಯಾವುದೇ ಕರಾರು ಮಾಡಿಕೊಂಡಿರುವುದಿಲ್ಲ. ಸಾಲವನ್ನು ನಾನು ಈಗಾಗಲೇ ಹಿಂದಿರುಗಿಸಿದ್ದೇನೆ. ಸಾಲ ಹಿಂದಿರುಗಿದ ಬಗ್ಗೆ ಯಾವುದೇ ರಸೀದಿಯನ್ನು ಪಡೆದಿರುವುದಿಲ್ಲ. ನನ್ನ ತಂದೆಯವರು ಒಟ್ಟು ಕುಟುಂಬದ ಆಸ್ತಿಯಿಂದ ದಾವಾ ಆಸ್ತಿಯನ್ನು ಖರೀದಿ ಮಾಡಿ ನನ್ನ ಹೆಸರಿಗೆ ತಾತ್ಕಾಲಿಕವಾಗಿ ನೊಂದಣಿ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸ್ವಂತ ದುಡಿಮೆ ಇರುವುದಿಲ್ಲ ಎಂದರೆ ಸರಿ. 2 ನೇ ವಾದಿಗೆ ಪಾಲು ನೀಡಬಾರದು ಎಂಬ ಉದ್ದೇಶದಿಂದ ನಾನು ಸಾಲ ಮಾಡಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವ ಆಧಾರದ ಮೇಲೆ ಸಾಲ ಪಡೆದಿರುತ್ತೀರಿ ಎಂದರೆ ಸಾಕ್ಷಿ ವಿಶ್ವಾಸದ ಮೇಲೆ ಸಾಲ ನೀಡಿರುತ್ತಾರೆ ಎಂದು ಹೇಳುತ್ತಾರೆ. 1 ನೇ ವಾದಿ ಬಾವಿಯಲ್ಲಿ 07.08/.2013 ರಂದು ಬಿದ್ದಿದ್ದರು. 1 ನೇ ವಾದಿ ಯಾವ ಕಾರಣಕ್ಕೆ ಬಾವಿಯಲ್ಲಿ ಬಿದ್ದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾವು ನೀಡುವ ಕಿರಕುಳದಿಂದ 1 ನೇ ವಾದಿ ಬಾವಿಗೆ ಬಿದ್ದಿದ್ದರು ಎಂದರೆ ಸರಿಯಲ್ಲ. ಬಾವಿಯಿಂದ ಅಲ್ಲಿದ್ದ ಜನರು 1 ನೇ ವಾದಿಯನ್ನು ಹೊರಗೆ ತೆಗೆದಿರುತ್ತಾರೆ. 1 ನೇ ವಾದಿಗೆ ಉಪಚಾರಕ್ಕಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಿರಾ ಎಂದರೆ ಸಾಕ್ಷಿ 1 ನೇ ವಾದಿ ಮೊದಲು ಮಗುವನ್ನು ಬಾವಿಗೆ ಹಾಕಿ ಕೊಂದಿರುತ್ತಾರೆ ಆದ ಕಾರಣ ಅವರನ್ನು ಉಪಚಾರಕ್ಕೆ ಕರೆದುಕೊಂಡು ಹೋಗಿರುವುದಿಲ್ಲ ಎಂದು ಹೇಳುತ್ತಾರೆ. 1 ನೇ ವಾದಿ ಮಗುವನ್ನು ಕೊಂದಿರುತ್ತಾರೆ ಎಂದು ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ವಾದಿಗಳನ್ನು ನನ್ನೊಂದಿಗೆ ಇಟ್ಟುಕೊಳ್ಳಬಾರದು ಎಂಬ ಉದ್ದೆಶದಿಂದ 1 ನೇ ವಾದಿಯ ಮೇಲೆ ಸುಳ್ಳು ಆಪಾದನೆ ಹೊರೆಸುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ವಾದಿಗೆ ಪಾಲು ನೀಡಬಾರದು ಎಂಬು ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರ ಸರಿಯಲ್ಲ. 2 ನೇ ವಾದಿಗೆ ದಾವಾ ಆಸ್ತಿಗೆ ಅರ್ಧ ಪಾಲು ಇದೆ ಎಂದರೆ ಸರಿ.ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

ಓ.ಹೇ.ಕೆ.ಸರಿ.ಇದೆ.

ಅಪರ ಸಿವಿಲ್ ನ್ಯಾಯಾಧೀಶರು
ಆಳಂದ.